ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
ಡಿಎಸ್‌ಇಆರ್‌ಟಿ
DSERT
Phone - 080 26980100
Fax - 080 26422377

ಸಂಖ್ಯೆ: DSERT/NTSE/NMMS ಫಲಿತಾಂಶ/1/2023-24 ದಿನಾಂಕ : 02-05-2023

# ಜ್ಞಾಪನಾ

ವಿಷಯ: 2022-23 ನೇ ಸಾಲಿನ NMMS ಪರೀಕ್ಷೆಯ ಫಲಿತಾಂಶ ಪ್ರಕಟಿಸುವ ಹಾಗೂ ನಿಗಧಿತ ನಮೂನೆಯಲ್ಲಿ ಅರ್ಹ ವಿದ್ಯಾರ್ಥಿಗಳ ಮಾಹಿತಿ ಪಡೆಯುವ ಬಗ್ಗೆ.

*********

2022-23 ನೇ ಸಾಲಿನ NMMS ಪರೀಕ್ಷೆ ದಿನಾಂಕ 22ನೇ ಜನೇವರಿ 2023 ರಂದು ನಡೆದಿದ್ದು, NMMS ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿದ್ಯಾರ್ಥಿ ವೇತನಕ್ಕೆ ಅರ್ಹರಾದ ವಿದ್ಯಾರ್ಥಿಗಳ ಫಲಿತಾಂಶವನ್ನು ದಿನಾಂಕ 26-04-2023 ರಂದು www.dsert.kar.nic.in ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ. ನಿಮ್ಮ ತಾಲ್ಲೂಕಿನಿಂದ__________ವಿದ್ಯಾರ್ಥಿಗಳು NMMS ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುತ್ತಾರೆ (soft ಪ್ರತಿ ಲಗತ್ತಿಸಿದೆ). ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಕೂಡಲೇ ನಿಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ. ಹಾಗೂ ಶಾಲೆಗಳ ಮುಖಾಂತರ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ತಿಳಿಸುವುದು ಹಾಗೂ ಆಯ್ಕೆಯಾದ ವಿದ್ಯಾರ್ಥಿಗಳ ಹೆಸರಿನಲ್ಲಿ ಎಸ್.ಬಿ.ಐ **( SBI ) ಅಥವಾ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಖಾತೆ ತೆರೆಯಲು ಕ್ರಮವಹಿಸುವುದು.**

ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆ (1) ರಲ್ಲಿ ನೀಡಿರುವ **1** ರಿಂದ **20** ರವರೆಗಿನ ಕಾಲಂ ಗಳಲ್ಲಿರುವ ಮಾಹಿತಿಯನ್ನು ತಪ್ಪಿಲ್ಲದೇ, (ಕಾಲಂಗಳಲ್ಲಿ ಸೂಚಿಸಿರುವಂತೆ) **New Times Roman font** ನಲ್ಲಿ ನಲ್ಲಿ ಡಿ.ಟಿ.ಪಿ ಮಾಡಿದ Soft ಮತ್ತು Hard ಪ್ರತಿಯನ್ನು ದಿನಾಂಕ : 05-06-2023 ರೊಳಗೆ ಸಂಬಂಧಿಸಿದ ಡಯಟ್ ನ NMMS ನೋಡಲ್ ಅಧಿಕಾರಿಗಳಿಗೆ ತಪ್ಪದೇ ಸಲ್ಲಿಸುವುದು. ವಿದ್ಯಾರ್ಥಿಗಳಿಂದ **ಪಾಸ್ ಬುಕ್ಕಿನ ಮುಖ ಪುಟದ ಝೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳುವುದು. ಎಲ್ಲಾ ವಿದ್ಯಾರ್ಥಿಗಳ ವಿವರಗಳುಳ್ಳ ಒಂದೇ ಪಟ್ಟಿ ಡಯಟ್ ಗೆ ನೀಡುವುದು. ಭಾಗಶಃ / ಅಪೂರ್ಣ ವಾದ ಮಾಹಿತಿಯನ್ನು ನೀಡುವಂತಿಲ್ಲ. ಮಾಹಿತಿಗಳನ್ನು ನಿಖರವಾಗಿ ನೀಡದಿದ್ದಲ್ಲಿ ಮುಖ್ಯ ಶಿಕ್ಷಕರು & ತಾಲ್ಲೂಕು ನೋಡಲ್ ಅಧಿಕಾರಿಗಳು ಜವಾಬ್ದಾರರಾಗುತ್ತಾರೆ.**

ಈ ವಿಷಯವನ್ನು ಆದ್ಯತೆ ಮೇರೆಗೆ ಪರಿಗಣಿಸಿ, ಮುಖ್ಯೋಪಾಧ್ಯಾಯರ ಸಭೆ ನಡೆಸಿ, ಅನುಬಂಧ-1 ರಲ್ಲಿ ಸೂಚಿಸಿರುವ ಎಲ್ಲಾ (ಅರ್ಹತೆ, ವಿದ್ಯಾರ್ಥಿವೇತನ ವಿತರಣೆ, ನಿಬಂಧನೆಗಳು....) ಮುಂತಾದ ಅಂಶಗಳನ್ನು NMMS ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಕಡ್ಡಾಯವಾಗಿ ತಿಳಿಸುವಂತೆ ಮುಖ್ಯ ಶಿಕ್ಷಕರಿಗೆ ಸೂಚಿಸತಕ್ಕದ್ದು.

ಆಯ್ಕೆಯಾದ ವಿದ್ಯಾರ್ಥಿಗಳು ಪ್ರತಿ ವರ್ಷ (9,10,11,12 ತರಗತಿಗಳಿಗೆ) ವಿದ್ಯಾರ್ಥಿವೇತನಕ್ಕೆ NSP 2.0 (www.scholarships.gov.in) ನಲ್ಲಿOnline ಮೂಲಕ ಅರ್ಜಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಆದರೆ, ಶಾಲೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಬಗ್ಗೆ ಯಾವುದೇ ದಾಖಲೆಗಳನ್ನು ನಿರ್ವಹಿಸದೇ, ಸರಿಯಾದ ಸಮಯದಲ್ಲಿ ವಿದ್ಯಾರ್ಥಿಗಳ ಅರ್ಜಿಗಳನ್ನು ಪರಿಶೀಲಿಸದೆ, ಶಾಲಾ ಹಂತದಲ್ಲಿ ( INO login) ವಿದ್ಯಾರ್ಥಿ ಅರ್ಜಿಗಳು ಉಳಿದಿರುವ ಉದಾಹರಣೆಗಳು ಇರುತ್ತವೆ. ಇಂತಹ ಸಂದರ್ಭದಲ್ಲಿ ಅರ್ಹ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನದಿಂದ ವಂಚಿತರಾದಲ್ಲಿ, ಸಂಬಂಧಪಟ್ಟ ಶಾಲಾ ಮುಖ್ಯ ಶಿಕ್ಷಕರು ಹಾಗು ಅಧಿಕಾರಿಗಳು ನೇರವಾಗಿ ಹೊಣೆಯಾಗಿರುತ್ತಾರೆ. ಆದ್ದರಿಂದ ಈ ಸಂಬಂಧ ಶಾಲಾ ಹಂತದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಮಾಹಿತಿಯನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ವಹಿ ನಿರ್ವಹಿಲು ಮುಖ್ಯ ಶಿಕ್ಷಕರಿಗೆ ಮಾರ್ಗದರ್ಶನ ಮಾಡುವುದು.

ಎಲ್ಲಾ ಡಯಟ್ ಪ್ರಾಂಶುಪಾಲರುಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ಕರೆದು ದೃಢೀಕೃತ ಮಾಹಿತಿಯನ್ನು ದಿನಾಂಕ: 5-6-2023 ರೊಳಗಾಗಿ ನಮೂನೆ-1 ರಲ್ಲಿ ಪಡೆಯಲು ಕ್ರಮಕೈಗೊಳ್ಳುವುದು ಹಾಗೂ ಅನುಬಂಧ-1ರ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು/ವಿದ್ಯಾರ್ಥಿಗಳಿಗೆ ತಿಳಿಸಿ, ಕಾಲಕಾಲಕ್ಕೆ ಡಿ.ಎಸ್.ಇ.ಆರ್.ಟಿ ಯಿಂದ ನೀಡಲಾಗುವ ನಿರ್ದೇಶನದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಅಡಕಗಳು : 1) annexure -1 (mhrd)
2) ನಮೂನೆ -1

ನಿರ್ದೇಶಕರು,
2/5/23
ಡಿ.ಎಸ್.ಇ.ಆರ್.ಟಿ.

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು ( ಅಭಿವೃದ್ಧಿ) ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು ( ಆಡಳಿತ) ಇವರಿಗೆ ಮಾಹಿತಿಗಾಗಿ.
3. ಉಪನಿರ್ದೇಶಕರು(ಅಭಿವೃದ್ಧಿ) ಇವರ ಮೂಲಕ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.